

# ಯುವಶಕ್ತಿಗೆ ನಿಜವಾದ ಸವಾಲು

-ಸೋಮಶೇಖರ ಶಿರಗುಪ್ಪಿ
ಕರ್ನಾಟಕ ತಂಡದ ಮಾಜಿ ಆಟಗಾರ



ದಿಗ್ಗಜ ಕ್ರಿಕೆಟಿಗರು ಆಗಿ ಹೋಗಿರುವ ಭಾರತ ತಂಡದಲ್ಲಿ ಈಗ ಯುವಶಕ್ತಿಯ ಸಾಮರ್ಥ್ಯ ಸಾಬೀತು ಆಗುವ ಸಮಯ. ವಿಶ್ವಕಪ್‌ನಲ್ಲಿ ಹೊಸ ತಂಡಗಳು ಮತ್ತು ಕ್ರಿಕೆಟ್‌ನಲ್ಲಿ ದೊಡ್ಡ ಸಾಧನೆ ಮಾಡಬೇಕು ಎನ್ನುವ ಕನಸು ಹೊತ್ತ ತಂಡಗಳೂ ಇವೆ. ಅವುಗಳಿಗೆ ಟೆಸ್ಟ್ ಮಾನ್ಯತೆ ಹೊಂದಿರುವ ರಾಷ್ಟ್ರಗಳ ಬಲವೇ ದೊಡ್ಡ ಸವಾಲಾಗಿದೆ.

ಹೊಸ ತಂಡಗಳ ಜೊತೆ ಆಡುವ ಅನುಭವ ಒಂದು ರೀತಿಯಾದರೆ ಈಗಾಗಲೇ ಚಾಂಪಿಯನ್‌ಪಟ್ಟ ಅಲಂಕರಿಸಿ ಸವಾಲಿಗೆ ಅಣಿಯಾಗಿರುವ ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತು ವೆಸ್ಟ್ ಇಂಡೀಸ್‌ನಂಥ ದೈತ್ಯ ಶಕ್ತಿಯ ತಂಡಗಳ ಎದುರು ಆಡಬೇಕಾಗಿದೆ. ಇತ್ತೀಚೆಗಷ್ಟೇ ಐಪಿಎಲ್‌ನಲ್ಲಿ ಆಡಿರುವ ಆಟಗಾರರು ಈಗ ದೇಶದ ತಂಡದ ಪೋಷಾಕು ಧರಿಸಲಿದ್ದಾರೆ. 2008ರಿಂದ ಆರಂಭವಾದ ಐಪಿಎಲ್‌ನಲ್ಲಿ ಸಾಕಷ್ಟು ಪ್ರತಿಭಾನ್ವಿತರು ಬೆಳಕಿಗೆ ಬಂದಿದ್ದು ಈ ಚುಟುಕು ಕ್ರಿಕೆಟ್ ಮೂಲಕವೇ ಅವರಿಗೆ ಸುಂದರ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಇದೇ ಕಾರಣದಿಂದ ಭಾರತ ತಂಡದ 15 ಸದಸ್ಯರ ಬಳಗದಲ್ಲಿ ಸ್ಥಾನ ಪಡೆದುಕೊಳ್ಳಲು ಪೈಪೋಟಿ ಹೆಚ್ಚಾಗಿದೆ.

ಇದು ನಮ್ಮ ದೇಶದ ತಂಡದ ಬೆಂಚ್ ಸ್ಟ್ರೆಂಥ್ ಹೆಚ್ಚಿಸಲು ಸಹಕಾರಿಯಾಗುತ್ತದೆಯಲ್ಲದೆ, ಆರೋಗ್ಯಕರ ಸ್ಪರ್ಧೆಯೂ ಸಾಧ್ಯವಾಗುತ್ತದೆ. ಈಗ ಅನೇಕ ಆಟಗಾರರು ದೇಶಿ ಟೂರ್ನಿಗಳಲ್ಲಿ ಆಡದವರೂ ಐಪಿಎಲ್‌ನಲ್ಲಿ ಅವಕಾಶ ಪಡೆದಿದ್ದಾರೆ. ಅಲ್ಲಿ ಉತ್ತಮ ಪ್ರದರ್ಶನ ತೋರಿ ಟಿ–20 ಮಾದರಿ ಮೂಲಕ ರಾಷ್ಟ್ರೀಯ ತಂಡದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಅನುಭವಿ ಆಟಗಾರರು ಕೂಡ ಸ್ಥಾನ ಗಳಿಸಲು ಪರದಾಡಬೇಕಾದ ಸ್ಥಿತಿಯಿದೆ. ಮಧ್ಯಮ ಕ್ರಮಾಂಕದಲ್ಲಿ ಬಹುತೇಕ ಯುವ ಆಟಗಾರರೇ ಇರುವ ಕಾರಣ ಅವರ ಪ್ರದರ್ಶನ ತಂಡದ ಸೋಲು–ಗೆಲುವು ನಿರ್ಧರಿಸುತ್ತದೆ.

ಭಾರತ ಮೊದಲ ಬಾರಿಗೆ ಟಿ–20 ವಿಶ್ವಕಪ್ ಗೆದ್ದಾಗ ಮಹೇಂದ್ರ ಸಿಂಗ್ ಧೋನಿ, ಗೌತಮ್ ಗಂಭೀರ್ ಅವರಂಥ ಅನುಭವಿ ಆಟಗಾರರು ಇದ್ದರು. ಈಗ ಅಂಥ ಜವಾಬ್ದಾರಿ ನಿರ್ವಹಿಸಬೇಕಾದ ಸವಾಲು ಕೊಹ್ಲಿ ಮತ್ತು ರೋಹಿತ್ ಶರ್ಮಾ ಮೇಲಿದೆ. ಬ್ಯಾಟಿಂಗ್, ಬೌಲಿಂಗ್, ಚುರುಕಿನ ಕ್ಷೇತ್ರ ರಕ್ಷಣೆ, ಸಂಘಟನಾತ್ಮಕ ಶಕ್ತಿಗಳ ಪರಿಣಾಮಕಾರಿ ಅನುಷ್ಠಾನಕ್ಕೆ ತಂಡ ರೂಪಿಸಿಕೊಂಡ ಯೋಜನೆಗಳು ಅನುಷ್ಠಾನಕ್ಕೆ ಬಂದರೆ ಭಾರತ ವಿಶ್ವಕಪ್ ಗೆಲ್ಲುವುದು ಕಷ್ಟವಾಗುವುದಿಲ್ಲ.

ಬ್ಯಾಟಿಂಗ್ ವಿಭಾಗದ ದೊಡ್ಡ ಶಕ್ತಿ. ಟಿ–20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನಾಲ್ಕು ಸಾವಿರಕ್ಕಿಂತಲೂ ಅಧಿಕ ರನ್ ಗಳಿಸಿದ ಮೊದಲ ಆಟಗಾರ ಎನ್ನುವ ಹೆಗ್ಗಳಿಕೆ ಅವರದು. ಈ ಬಾರಿಯ ಐಪಿಎಲ್‌ನಲ್ಲಿಯೂ ನಿರಂತರವಾಗಿ ಉತ್ತಮ ಪ್ರದರ್ಶನ ತೋರಿದ್ದಾರೆ. ತಂಡವನ್ನು ಮುನ್ನಡೆಸಿದ ಅನುಭವ ಹೊಂದಿರುವ 35 ವರ್ಷದ ಕೊಹ್ಲಿ ತಂಡದಲ್ಲಿದ್ದರೆ ಹೊಸ ಆಟಗಾರರಿಗೆ ಅದೇ ಹುಮ್ಮಸ್ಸು.

ಅಗ್ರ ಕ್ರಮಾಂಕದ ಬ್ಯಾಟಿಂಗ್‌ನಲ್ಲಿ ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್ ಮತ್ತು ವಿರಾಟ್ ಕೊಹ್ಲಿ ದೊಡ್ಡ ಶಕ್ತಿ. ರೋಹಿತ್ 2008–2024ರ ಅವಧಿಯಲ್ಲಿ ಗಳಿಸಿರುವ ಒಟ್ಟು 26,733 ರನ್‌ಗಳು ಅವರ ಬ್ಯಾಟಿಂಗ್ ಸಾಮರ್ಥ್ಯಕ್ಕೆ ಸಾಕ್ಷಿಯಂತಿವೆ. ರೋಹಿತ್ ಶರ್ಮಾ 2007ರ ಚೊಚ್ಚಲ ಟಿ–20 ವಿಶ್ವಕಪ್‌ನಲ್ಲಿ ಐದು ಅಥವಾ ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದರು. ಈಗ ಇನಿಂಗ್ಸ್ ಆರಂಭಿಸುವ ಮಟ್ಟಿಗೆ ಬಡ್ತಿ ಪಡೆದಿದ್ದಾರೆ. ಅಂತರರಾಷ್ಟ್ರೀಯ ಟಿ–20 ಮಾದರಿಗೆ ಪದಾರ್ಪಣೆ ಮಾಡಿದ 2007ರಿಂದ ಹಿಡಿದು ಇದುವರೆಗೆ 151 ಪಂದ್ಯಗಳನ್ನಾಡಿದ್ದು 3,974 ರನ್‌ಗಳನ್ನು ಗಳಿಸಿದ್ದಾರೆ. ಇವರ ನಾಯಕತ್ವದಲ್ಲಿ ಭಾರತ ಕಳೆದ ವರ್ಷ ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ಫೈನಲ್ ಪ್ರವೇಶಿಸಿತ್ತು.

ಕಳೆದ ವರ್ಷವಷ್ಟೇ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿರುವ 22 ವರ್ಷದ ಯಶಸ್ವಿ ಜೈಸ್ವಾಲ್ ಭರವಸೆಯ ಮಿನುಗುತಾರೆ. 8 ಟೆಸ್ಟ್, 17 ಅಂತರರಾಷ್ಟ್ರೀಯ ಟಿ–20 ಪಂದ್ಯಗಳಲ್ಲಿ ದೇಶವನ್ನು ಪ್ರತಿನಿಧಿಸಿದ್ದಾರೆ. ಐಪಿಎಲ್‌ನಲ್ಲಿ ಮುಂಬೈ ಹಾಗೂ ರಾಜಸ್ಥಾನ ರಾಯಲ್ಸ್ ತಂಡಗಳಲ್ಲಿ ಆಡಿದ್ದು, ಲಿಸ್ಟ್ ಎ ಮಾದರಿಯಲ್ಲಿ ದ್ವಿಶತಕ ಬಾರಿಸಿದ ಕಿರಿಯ ಆಟಗಾರ ಎನಿಸಿದ್ದಾರೆ.

2022ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿ ಜೈಸ್ವಾಲ್ ಇದ್ದರು. ಇದೇ ವರ್ಷ ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟೆಸ್ಟ್ ಸರಣಿಯ ಎರಡು ಪಂದ್ಯಗಳಲ್ಲಿ ಸತತ



ಭಾರತ ತಂಡದ ಬ್ಯಾಟಿಂಗ್‌ನ ಯುವಶಕ್ತಿ ಯಶಸ್ವಿ ಜೈಸ್ವಾಲ್